**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ , ದಾವಣಗೆರೆ.**

SC. No.96/2024

| ಫಿರ್ಯಾದಿದಾರರು | ವಿರುದ್ಧ | ಆರೋಪಿತರು |
|---|---|---|
| ರಾಜ್ಯದ ಪರವಾಗಿ ಜಗಳೂರು ಪೊಲೀಸ್ ಠಾಣೆ, ಜಗಳೂರು | | ಬಸವರಾಜ.ವಿ. ತಂದೆ ವೀರ ಬಸಪ್ಪ, ವಯಸ್ಸು 35 ವರ್ಷ, ವಾಸಃ ಆಲೂರು ಗ್ರಾಮ, ಕೂಡ್ಲಿಗಿ ತಾಲ್ಲೂಕು, ವಿಜಯನಗರ ಜಿಲ್ಲೆ. |

**ದೋಷಾರೋಪಣೆ**

ನಾನು ಶ್ರೀ. ಪ್ರವೀಣ್ ಕುಮಾರ್.ಆರ್.ಎನ್., ಬಿ.ಕಾಂ. ಎಲ್.ಎಲ್.ಬಿ, 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು , ದಾವಣಗೆರೆ ;-

ಆರೋಪಿತರಾದ - ಬಸವರಾಜ.ವಿ. ತಂದೆ ವೀರ ಬಸಪ್ಪ, ವಯಸ್ಸು 35 ವರ್ಷ, ವಾಸಃ ಆಲೂರು ಗ್ರಾಮ, ಕೂಡ್ಲಿಗಿ ತಾಲ್ಲೂಕು, ವಿಜಯನಗರ ಜಿಲ್ಲೆ.

ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪವಿಡುತ್ತೇನೆ.

1. ಮೊದಲನೇಯದಾಗಿ, ಆರೋಪಿಯಾದ ನೀನು ಸಾಕ್ಷಿ-4 ವಿಜಯರವರ ಪತಿಯಾಗಿದ್ದು, ಆರೋಪಿಯಾದ ನೀನು ಸಾಕ್ಷಿ-4 ವಿಜಯರವರಿಗೆ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆಯನ್ನು ನೀಡಿದ್ದು, ಈ ವಿಚಾರವಾಗಿ ಜಗಳೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಅಲ್ಲಿಂದ ಸಾಕ್ಷಿ-4 ರವರು ಜಗಳೂರು ಪಟ್ಟಣದ ಜೆಸಿಆರ್ ಬಡಾವಣೆಯಲ್ಲಿರುವ ಓಬಳೇಶ ತಂದೆ ಓಬಣ್ಣರವರ ಮನೆಯಲ್ಲಿ ಬಾಡಿಗೆ ಮಾಡಿಕೊಂಡು ಇದ್ದು, ಸಾಕ್ಷಿ-4 ರವರಿಗೆ ಸಾಕ್ಷಿ-5 ರವರು ತಾಯಿಯಾಗಿದ್ದು, ಸಾಕ್ಷಿ-1 ರವರು ಸಹೋದರರಾಗಿದ್ದು, ಆರೋಪಿಯಾದ ನೀನು ದಿಃ 29-03-2024 ರಂದು ಮಕ್ಕಳ ನೆಪ ಮಾಡಿಕೊಂಡು ಸಾಕ್ಷಿ-4 ವಿಜಯರವರು ವಾಸವಾಗಿರುವ ಜಗಳೂರು ಪಟ್ಟಣದ ಜೆಸಿಆರ್ ಬಡಾವಣೆಯಲ್ಲಿರುವ ಮನೆಗೆ ಬಂದು ರಾತ್ರಿ 10-00 ಗಂಟೆ ಸಮಯದಲ್ಲಿ ಆರೋಪಿಯಾದ ನೀನು ಸಾಕ್ಷಿ-4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡುತ್ತಾ ನನ್ನ ಮೇಲೆ ಕಂಪ್ಲೇಂಟ್ ಕೊಡ್ತೀಯಾ ಎಂದು ಬೈದಾಡಿ ಸಾಕ್ಷಿ-4 ರವರನ್ನು ಹಿಡಿದುಕೊಂಡು ಹೊಡೆದು ಎತ್ತಿ ನೆಲಕ್ಕೆ ಹಾಕಿದ್ದು, ಸಾಕ್ಷಿ-4 ರವರ ತಲೆಯು ನೆಲಕ್ಕೆ ಬಿದ್ದು ತಲೆಗೆ ಪೆಟ್ಟು ಬಿದ್ದು ಸಾಮಾನ್ಯ ಸ್ವರೂಪದ ಗಾಯವಾಗಿದ್ದು, ಸಾಕ್ಷಿ-4 ರವರಿಗೆ ಪೆಟ್ಟು ಬಿದ್ದಿದ್ದನ್ನು ಸಾಕ್ಷಿ-6 ಮತ್ತು 7 ರವರು ಸಾಕ್ಷಿ-1 ರವರ ಮನೆಗೆ ಹೋಗಿ ವಿಚಾರವನ್ನು ತಿಳಿಸಿದ್ದು, ಸಾಕ್ಷಿ-1 ರವರು ಸಾಕ್ಷಿ-4 ರವರ ಮನೆಗೆ ಹೋಗಿ ಸಾಕ್ಷಿ-4 ರವರನ್ನು ಕರೆದುಕೊಂಡು ಸಾಕ್ಷಿ-1 ರವರ ಮನೆಯ ಮುಂದೆ ಹೋಗುತ್ತಿರುವಾಗ ಸಾಕ್ಷಿ-1 ರವರನ್ನು ಆರೋಪಿಯಾದ ನೀನು ಹಿಂಬಾಲಿಸಿಕೊಂಡು ಹೋಗಿ ಅವಾಚ್ಯ ಶಬ್ದಗಳಿಂದ

ಬೈದು, ತನ್ಮೂಲಕ ಸಾರ್ವಜನಿಕ ಶಾಂತತ ಭಂಗವುಂಟು ಮಾಡುವಂತೆ ಪ್ರಚೋದನೆ ಮಾಡಿದ್ದು, ಆ ಪ್ರಕಾರ ಕಲಂ 504 ರ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

2. ಎರಡನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯದ ನೀನು ಸಾಕ್ಷಿ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೇ, ಸಾಕ್ಷಿ-1 ರವರಿಗೆ ನಿನ್ನನ್ನು ಬಿಡುವುದಿಲ್ಲ ಎಂದು ಚಾಕುವನ್ನು ತೆಗೆದುಕೊಂಡು ಕೊಲೆ ಮಾಡುವ ಉದ್ದೇಶದಿಂದ ಸಾಕ್ಷಿ-1 ರವರ ಹೊಟ್ಟೆಗೆ ಮತ್ತು ಬಲಗೈ ಮುಂಗೈಗೆ ಚುಚ್ಚಿದ್ದು, ಅಷ್ಟರಲ್ಲಿ ಸಾಕ್ಷಿ-5 ರವರು ಬಿಡಿಸಲು ಹೋದಾಗ ಅವರಿಗೂ ಆರೋಪಿಯಾದ ನೀನು ಚಾಕುವಿನಿಂದ ಬಲ ಮುಂಗೈಗೆ ಚುಚ್ಚಿ ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಆ ಪ್ರಕಾರ ಕಲಂ 324 ರ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

3. ಮೂರನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯದ ನೀನು ಸಾಕ್ಷಿ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೇ, ಸಾಕ್ಷಿ-1 ರವರಿಗೆ ನಿನ್ನನ್ನು ಬಿಡುವುದಿಲ್ಲ ಎಂದು ಚಾಕುವನ್ನು ತೆಗೆದುಕೊಂಡು ಕೊಲೆ ಮಾಡುವ ಉದ್ದೇಶದಿಂದ ಸಾಕ್ಷಿ-1 ರವರ ಹೊಟ್ಟೆಗೆ ಮತ್ತು ಬಲಗೈ ಮುಂಗೈಗೆ ಚುಚ್ಚಿದ್ದು, ಅಷ್ಟರಲ್ಲಿ ಸಾಕ್ಷಿ-5 ರವರು ಬಿಡಿಸಲು ಹೋದಾಗ ಅವರಿಗೂ ಆರೋಪಿಯಾದ ನೀನು ಚಾಕುವಿನಿಂದ ಬಲ ಮುಂಗೈಗೆ ಚುಚ್ಚಿ ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಒಂದಾನುವೇಳೆ ಸಾಕ್ಷಿ-1 ರವರು ಅದರಿಂದ ಮೃತಪಟ್ಟಿದ್ದಲ್ಲಿ ಕೊಲೆ ಅಪರಾಧಕ್ಕೆ ಎಷ್ಟು ಮಟ್ಟದ ಶಿಕ್ಷೆಯಾಗುತ್ತಿತ್ತೊ ಅಷ್ಟೇ ಪ್ರಮಾಣದ ಅಪರಾಧ ಮಾಡಿದ್ದು, ಆ ಪ್ರಕಾರ ಕಲಂ 307 ರ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

4. ಕೊನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯದ ನೀನು ಸಾಕ್ಷಿ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಹಲ್ಲೆ ಮಾಡಿದ್ದಲ್ಲದೇ, ಸಾಕ್ಷಿ-1 ರವರಿಗೆ ನಿನ್ನನ್ನು ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದು, ಆ ಪ್ರಕಾರ ಕಲಂ 506 ರ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

5. ಇಂದು 04 ನೇ ತಾರೀಖು ಅಕ್ಟೋಬರ್ ಮಾಹೆ 2025

( ಈ ಮೇಲಿನ ದೋಷಾರೋಪಣೆಯನ್ನು ಆರೋಪಿತನಿಗೆ ಓದಿ, ತಿಳಿಸಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮ ತೆಗೆದುಕೊಳ್ಳಲಾಯಿತು.)

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2025.10.04 11:53:15 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ , ದಾವಣಗೆರೆ.**

SC. No.96/2024

| ಫಿರ್ಯಾದಿದಾರರು | ವಿರುದ್ಧ | ಆರೋಪಿತರು |
|---|---|---|
| ರಾಜ್ಯದ ಪರವಾಗಿ ಜಗಳೂರು ಪೊಲೀಸ್ ಠಾಣೆ, ಜಗಳೂರು | | ಬಸವರಾಜ.ವಿ. ತಂದೆ ವೀರ ಬಸಪ್ಪ, ವಯಸ್ಸು 35 ವರ್ಷ, ವಾಸಃ ಆಲೂರು ಗ್ರಾಮ, ಕೂಡ್ಲಿಗಿ ತಾಲ್ಲೂಕು, ವಿಜಯನಗರ ಜಿಲ್ಲೆ. |

ಆರೋಪಿಯ ಹೇಳಿಕೆ

ಪ್ರಶ್ನೆ 1 – ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ?

ಉತ್ತರ -

ಪ್ರಶ್ನೆ 2 – ನೀನು ತಪ್ಪನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ -

(ಆರೋಪಿ ಹೇಳಿಕೆಯನ್ನು ಆತನ ಹೇಳಿಕೆ ಮೇರೆಗೆ ಮತ್ತು ನನ್ನ ಸಮಕ್ಷಮದಲ್ಲಿ ತೆಗೆದುಕೊಳ್ಳಲಾಯಿತು.)

PRAVEEN KUMAR RAGHAV NAIK
Digitally signed by PRAVEEN KUMAR RAGHAV NAIK
Date: 2025.10.04 11:53:23 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

ದಿನಾಂಕ. 04-10-2025